ಇವನ ಕಲಿಕೆ ಮುಂದುವರಿದ್ರೆ ಏನಾಗುತ್ತೆ?" ಎಂದು ಕುಮುದಳು ಪ್ರಶ್ನಿಸಿದ್ದಾಳಷ್ಟೆ. ಅಪ್ಪ ಅಕ್ಷಯಕುಮಾರ ತನ್ನ ಬುಡಕ್ಕೆ ಬೆಂಕಿ ಬಿದ್ದವನಂತೆ ಅಸಹನೆಯಿಂದ ಕನಲಿ ಅಬ್ಬರಿಸಿದ್ದ : ''ನಾನು ಹೇಳಿದಷ್ಟು ಕೇಳ್ಕೊಂಡು ಬಿದ್ದಿರೆ ನೀನು ; ನನ್ನ ಮಗನ ವಿಷಯದಲ್ಲಿ ನಡುವೆ ಬಾಯಾಕ್ಬೇಡ ನೋಡು. ಇದು ನಿನ್ನ ಕಾಲ ಅಲ್ಲ. ಇದು ಕಾಂಪಿಟೇಷನ್ ಕಾಲ. ನಾನು ಕೆಮಿಸ್ಟ್ರಿಯಲ್ಲಿ ಡಬಲ್ ಗ್ರಾಜ್ಯುಯೇಟ್ ಅಂತ ಗೊತ್ತಲ್ವ ನಿಂಗೆ. ಆದ್ರೆ ಏನು ಪ್ರಯೋಜನ ಹೇಳು ? ಒಬ್ಬ ಡಾಕ್ಟ್ರು– ಎಂಜಿನಿಯರ್‌ಗಿರುವ ಗೌರವ ನನ್ಗೆ ಇದೆಯಾ ಈಗ? ನನ್ನ ಮಗ ನನ್ನಂತೆ ಆಗುದು ನನಗೆ ಇಷ್ಟ ಇಲ್ಲ. ಅವ್ನು ಒಬ್ಬ ಡಾಕ್ಟ್ರೋ ಅಥವಾ ಸಾಫ್ಟ್‌ವೇರೋ ಆಗದಿದ್ರೆ, ನಾವು ಅವನನ್ನು ಓದಿಸಿ ಏನು ಪ್ರಯೋಜನ !? ಬೇಸ್‌ಮೆಂಟಲ್ಲೇ ಮಕ್ಕಳಿಗೆ ಐಸಿಎಸ್ಸಿ ಸಿಲಬಸ್‌ನಲ್ಲಿ ಓದಿಸಿದ್ರೆ... ಅವು ಎಲ್ಲವನ್ನು ಅರಗಿಸಿಕೊಳ್ಳುತ್ತವೆ; ಮಕ್ಳು ಈಗ ಎಷ್ಟು ಓದಿದರೂ ಸಾಲದ ಕಾಲವಿದು."

"ಅಂದ್ರೆ ನಾಳೆನೂ ಮತ್ತೆ ಅವನ ಹಳೆಯ ಪುಸ್ತಕಗಳನ್ನು ಅವ್ನು ಓದಬೇಕಾ !?" ಪಾಪ ಆ ಮಗು ರಜೆ ಬಂದಿದೆ ಊರಿಗೆ ಅಜ್ಜನ ಮನೆಗೆ ಹೋಗಬೇಕೂಂತ ಸಿದ್ಧವಾಗಿ ಕೂತಿದೆ... ಒಂದು ತಿಂಗಳ ಹಿಂದಿನಿಂದಲೂ ಅದು, 'ರಜೆ ಯಾವಾಗ ಶುರುವಾಗುತ್ತಮ್ಮ...' ಅಂತ ಕೇಳ್ತಾನೆ ಇತ್ತು..." ಎಂದು ದುಃಖ ಉಕ್ಕಿಸಿಕೊಂಡು ಗಂಡನಿಗಂದಳು ಕುಮುದ.

ಹೆಂಡತಿಯ ಮಾತು ಕೇಳಿ ಅಪಾರ ಸಿಟ್ಟಿನಿಂದ ಉರಿದುಬಿದ್ದವನೇ ಅಕ್ಷಯಕುಮಾರ, 'ಏನಂತೆ ಅವನ್ದು !? ಅಜ್ಜನ ಮನೆಗಾ ? ಏನು... ಇವನಲ್ಲಿ ಏನಾದ್ರೂ ಗಂಟು ಇಟ್ಟಿದ್ದಾನಂತಾ? ಏನೂ ಬೇಡ, ನೆಟ್ಟಗೆ ರಜೆಯಲ್ಲಿ ಕೂತು, ಮಗ್ಗಿ ಬರೆದು, ಕೂಡುವುದು, ಕಳೆಯುವುದು, ಮಿಸ್ಸಿಂಗ್ ನಂಬರ್ಸ್ ಹುಡುಕುವ ಕೆಲಸ ಮಾಡಲಿ. ನಾಳೆ ಆ ಹೊಸ ಶಾಲೆಯವರು ಎಂಟ್ರೆನ್ಸ್ ಪರೀಕ್ಷೆಗಾಗಿ ನಾಲ್ಕು ಹೊಸ ಪುಸ್ತಕಗಳನ್ನು ಕೊಡ್ತಾರಂತೆ... ನಾಳೆನೆ ತರ್ತೇನೆ. ನೀನು ಹಗಲು ಓದಿಸು, ರಾತ್ರಿ ನಾನು ಓದಿಸ್ತೇನೆ..."

ಗಂಡನ ಮಾತು ಕೇಳಿ ಕುಮುದಳಿಗೆ ಒಡಲಿಂದ ದುಃಖವು ಉಕ್ಕಿ ಬಂದಿತ್ತು. ಇವತ್ತು ಮಧ್ಯಾಹ್ನ ಪರೀಕ್ಷೆ ಮುಗಿಸಿ ಬಂದವನೇ ಕೌಶಿಕ, ತನ್ನ ಬೆನ್ನಿಗೆ ಬಾವಲಿಯಂತೆ ಜೋತು ಬಿದ್ದಿದ್ದ ಬ್ಯಾಗನ್ನು ಬಿಚ್ಚಿ, ಮಂಚದ ಉತ್ತರ ದಿಕ್ಕಲಿರುವ ಸಂದಿಗೆ ಎಸೆದುಬಿಟ್ಟವನೇ, "ಅಮ್ಮ ಇವತ್ತು ಪರೀಕ್ಷೆ ಮುಗಿತಲ್ಲಮ್ಮ ; ಇನ್ನು ಓದುವುದೇನಿಲ್ಲ ನಂಗೆ. ನನ್ನ ಆ ಪುಸ್ತಕಗಳನ್ನೆಲ್ಲ ನಾನಿನ್ನು ನೋಡಲ್ಲ... ಮುಟ್ಟಲ್ಲ... ಎಲ್ಲವನ್ನು ನಮ್ಮ ಪೇಪರ್‌ಮಾಮನಿಗೆ ಮಾರಿಬಿಡಮ್ಮ ಪ್ಲೀಸ್sss" ಎಂದು ಹೇಳಿದವನೇ ಅಮ್ಮ ಉಣ್ಣೆಸೋದಕ್ಕೆ ತಂದಿದ್ದ, ಊಟದ ತಟ್ಟೆಯಲ್ಲಿದ್ದ ಎರಡು ಹಪ್ಪಳಗಳನ್ನು ಎತ್ತಿಕೊಂಡು ಮನೆಯ ಬಾಲ್ಕನಿಯತ್ತ ಓಡಿದ್ದ. ಆತನಿರುವ ಅಪಾರ್ಟ್‌ಮೆಂಟಿನ ಗೇಟಿನ ಒಳಗಡೆ ಬೀದಿನಾಯಿಯ ಮರಿಯೊಂದು ನಿಂತಿರುವುದನ್ನು ಶಾಲೆಯಿಂದ ಬರುವಾಗಲೇ ನೋಡಿದ್ದ ಕೌಶಿಕ – ಅದಕ್ಕೆ ಬಾಲ್ಕನಿಯಿಂದಲೇ ಹಪ್ಪಳ ಎಸೆಯಲು ಅತ್ತ ಓಡಿದ್ದ.

ಊಟದ ತಟ್ಟೆ ಹಿಡಿದು ಹಾಗೇ... ಮಗನ ಹಿಂದೆಯೇ ಬಾಲ್ಕನಿಯತ್ತ ಹೋದ ಕುಮುದ ಅಲ್ಲಿಯೇ ಆತನಿಗೆ ಉಣಿಸಿ ಬಂದವಳು, ಹಿಂದಿರುಗಿ ಬಂದು ಮಾಡಿದ ಮೊದಲ ಕೆಲಸವೆಂದರೆ, ತನ್ನ ಮಗುವನ್ನು ವರುಷವಿಡೀ ಕಾಡಿ, ಅಳಿಸಿ, ಕುಗ್ಗಿಸಿ, ಬಾಗಿಸಿ, ಆತನಿಂದ ತಮ್ಮ ಕಿವಿ, ಮೂಗು, ಬೆನ್ನುಗಳನ್ನೆಲ್ಲಾ ಜಜ್ಜಿಸಿಕೊಂಡು ಮೂಲ ಬಣ್ಣ ಕಳೆದುಕೊಂಡಿದ್ದ, ಎಲ್ಲಾ ಪುಸ್ತಕಗಳನ್ನು ರಟ್ಟಿನ ಡಬ್ಬದಲ್ಲಿ ತುಂಬಿಸಿಬಿಟ್ಟು ಸ್ನಾನದ ಕೋಣೆಯ ಮೇಲಿರುವ ಅಟ್ಟಕ್ಕೆ ತಳ್ಳಿದ್ದು.

ಇದೀಗ ಕೌಶಿಕ, ಅಡುಗೆ ಮನೆಯಲ್ಲಿ ತೆಂಗಿನಕಾಯಿ ತುರಿಯುತ್ತಿದ್ದ ಅಮ್ಮನ ಬೆನ್ನ ಮೇಲೆ ಬಿದ್ದು, ಆಕೆಯಲ್ಲಿ 'ರಜೆಗೆ ಊರಿಗೆ ಹೋಗ್ಲಿಕ್ಕೆ ಇಲ್ವಮ್ಮಾ...' ಎಂದು ಕೊರಳೊಡ್ಡಿ ಕೇಳಿದ